# ಸರ್ವ ಸಾಧಾರಣ ಸಭೆಯ ಠರಾವು

**ಸಭೆ ನಡೆದ ಸ್ಥಳ : ಗಾಯತ್ರಿ ಕನ್ವೆಂಷನ ಹಾಲ್, ಪ್ರವಾಸಿ ಮಂದಿರ ರಸ್ತೆ, ಬೆಂಗಳೂರು–ಮೈಸೂರ ಹೈವೆ, ಶ್ರೀರಂಗಪಟ್ಟಣದಲ್ಲಿ, ಮಂಡ್ಯ ಜಿಲ್ಲೆ,**

**ಸಭೆಯ ದಿನಾಂಕ: 07&08–05–2022 ಶನಿವಾರ ಮತ್ತು ರವಿವಾರ ಬೆಳಿಗ್ಗೆ 11–00 ಘಂಟೆಗೆ.**

| ಅ.ನಂ. | ವಿಷಯ | ಠರಾವು |
|---|---|---|
| 01. | ಶ್ರೀ. ನಿಮಿಷಾಂಬಾ ದೇವಿಯ ಪೂಜೆ ಮತ್ತು ಪ್ರಾರ್ಥನೆ. | ಪ್ರಥಮವಾಗಿ ಶ್ರೀ. ನಿಮಿಷಾಂಬಾ ದೇವಿ ಪೂಜೆಯೊಂದಿಗೆ ಪ್ರಾರ್ಥನೆ ಸಲ್ಲಿಸಿ ಕಾರ್ಯಕ್ರಮ ಆರಂಭಗೊಂಡಿತು. ಕಾರ್ಯಕ್ರಮಕ್ಕೆ ಶ್ರೀ. ಗೋಪಾಲಕೃಷ್ಣಾ ಧಾಪ್ಪೇಯವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು ಶ್ರೀ. ಶ್ರೀನಿವಾಸ ಪೇಟಕರ ರವರು ಕಾರ್ಯಾಧ್ಯಕ್ಷರಾಗಿ ಹಾಗೂ ಶ್ರೀ. ಮೋಹನರಾವ ಪಿಂಪಳೆ, ಅಧ್ಯಕ್ಷರು ಸೋಮವಂಶ ಆರ್ಯ ಕ್ಷತ್ರೀಯ ಪ್ರಾದೇಶಿಕ ಸಂಸ್ಥೆ ಮಹಾರಾಷ್ಟ್ರ, ಶ್ರೀ. ಚಂದ್ರಶೇಖರ ಚವ್ಹಾಣ. ಅಧ್ಯಕ್ಷರು ಸೋಮವಂಶ ಆರ್ಯ ಕ್ಷತ್ರೀಯ ಮರಾಠಿ ಸಮಾಜ ತೆಲಂಗಾಣ ಮತ್ತು ಶ್ರೀ. ಮೋಹನರಾವ ಆಹೇರ. ಅಧ್ಯಕ್ಷರು ಶ್ರೀ. ಸೋಮವಂಶ ಆರ್ಯ ಕ್ಷತ್ರೀಯ ಸಮಾಜ ಪುಣೆ. ಶ್ರೀ. ಕೆ.ಕೆ. ಸುಭ್ರಮಣಿ ಶ್ರೀರಂಗಪಟ್ಟಣ, ಕಾವೇರಿ ಕನ್ಯಾ ಗುರುಕುಲದ ಸಂಸ್ಥಾಪಕರು/ ಅಧ್ಯಕ್ಷರು, ಮುಖ್ಯ ಅತಿಥಿಗಳಾಗಿ ವೇದಿಕೆಯ ಮೇಲೆ ಆಸಿನರಾಗಿದ್ದರು. ಶ್ರೀ. ಪ್ರೇಮಕುಮಾರ ದಯ್ಯಾರೆ. ಚನ್ನೈ, ಗಂಜಾಮ ಸಮಾಜದ ಅಧ್ಯಕ್ಷರಾದ ಶ್ರೀ. ಆದಿಶೇಷರಾವ. ಗವಳಿ. ಹಾಗೂ ರಾಜ್ಯ ಸಂಸ್ಥೆಯ ದ್ವಿತೀಯ ಸಹಕಾರ್ಯದರ್ಶಿ ಶ್ರೀ. ಗಿರೀಶ. ವ್ಹಿ. ಕಾಳೆ. ಖಜಾಂಚಿಗಳಾದ ಶ್ರೀ. ಪ್ರಕಾಶ. ಕಸುಂದೆ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಅಲ್ಲದೆ ಕಾರ್ಯಕ್ರಮಕ್ಕೆ ರಾಜ್ಯಾದ್ಯಂತ ಇರುವ ಹೆಚ್ಚಿನ ಸಂಖ್ಯೆಯ ಪ್ರತಿನಿಧಿ ಸದಸ್ಯರು ಸ್ಥಾನಿಕ ಸಮಾಜದ ಅಧ್ಯಕ್ಷರು ಗೌರವ ಸದಸ್ಯರು ದಾನಿಗಳು ಗಂಜಾಮ್ ಸಮಾಜದ ಹಿರಿಯರು ಬಂಧು ಭಗನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.<br>ಸೂಚಕರು :– ಶ್ರೀ. ಜಯರಾಂರಾವ. ಧಾಯರೆ.<br>ಅನುಮೋದಕರು:– ಶ್ರೀ. ಮಹೇಶ. ಕವಟೇಕರ. |
| 02. | ಅಗಲಿದ ಸಮಾಜದ ಗಣ್ಯರಿಗೆ ಶ್ರದ್ಧಾಂಜಲಿ (2ನಿಮಿಷ ಮೌನ ಆಚರಣೆ). | ಸಭೆಯಲ್ಲಿ, ಅಗಲಿದ ಸಮಾಜದ ಗಣ್ಯರು, ರಾಜ್ಯ ಸಂಸ್ಥೆಯ ಹಾಲಿ ಕಾರ್ಯಕಾರಿ ಮಂಡಳಿ ಸದಸ್ಯರಾಗಿದ್ದ ಶ್ರೀ. **ಸತ್ಯನಾರಾಯಣ ಎಲ್. ದರ್ಶನಕರ. ಕಲಬುರ್ಗಿ**. ಮಾಜಿ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ. **ಸೋಮಣ್ಣ. ಚಿತ್ರಗಾರ. ಕೊಪ್ಪಳ**. ಹಾಗೂ ಮಾಜಿ ಕಾರ್ಯಾಧ್ಯಕ್ಷರು, ಶ್ರೀ. **ನಾಗರಾಜರಾವ ಪೋಣಾರಕರ. ಶಿವಮೊಗ್ಗ**. ಮಾಜಿ ಕಾರ್ಯಕಾರಿ ಮಂಡಳಿ ಸದಸ್ಯರಾಗಿದ್ದ ಶ್ರೀ. **ಶಂಕರರಾವ ಪೇಟಕರ ದೇವದುರ್ಗ**, ಶ್ರೀ. **ರಾಮಕೃಷ್ಣ ಚವ್ಹಾಣ ಸುರಪುರ**, ಶ್ರೀ. **ಪ್ರಕಾಶ ಚವ್ಹಾಣ ಚಿತ್ತಾಪೂರ**, ರಾಜ್ಯ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಶ್ರೀ. **ಬಾಬುರಾವ ಚಿತ್ರಗಾರ ಖಾನಾಪೂರ**, ಹಾಗೂ ಮಾಜಿ ಕಾರ್ಯಾಧ್ಯಕ್ಷರಾಗಿದ್ದ ಶ್ರೀ. **ದೋಂಡಿಬಾ ಜಾಧವ. ಹುಬ್ಬಳ್ಳಿ** ಇವರ ಸಾಮಾಜಿಕ ಕಳಕಳಿ, ಸಂಸ್ಥೆಗೆ/ಸಮಾಜಕ್ಕೆ ಇವರು ಸಲ್ಲಿಸಿದ ಸೇವೆ ಕೊಡುಗೆಗಳನ್ನು |

| | | |
|---|---|---|
| | | ಸ್ಮರಿಸುತ್ತಾ ದಿವಂಗತರಿಗೆ ಚಿರಶಾಂತಿ ಕೋರಿ 2 ನಿಮಿಷ ಮೌನ ಆಚರಣೆ ಮಾಡಿ ಶ್ರಂದಾಂಜಲಿ ಸಲ್ಲಿಸಲಾಯಿತು.<br>ಸೂಚಕರು :– ಶ್ರೀ. ಸುರೇಶ. ಕವಟೇಕರ.<br>ಅನುಮೋದಕರು:– ಶ್ರೀ. ಪುರುಷೊತ್ತಮ. ಕವಟೇಕರ. |
| 03. | ದಿನಾಂಕ: 08–11–2020ರ ವಾರ್ಷಿಕ ಸರ್ವ ಸಾಧಾರಣ ಸಭೆಯ ನಡುವಳಿಕೆಗಳನ್ನು ಓದುವದು ಮತ್ತು ದೃಢೀಕರಿಸುವದು. | ದಿನಾಂಕ: 08–11–2020ರ ವಾರ್ಷಿಕ ಸರ್ವಸಾಧಾರಣ ಸಭೆಯ ನಡುವಳಿಕೆಗಳನ್ನು ದ್ವಿತಿಯ ಸಹ ಕಾರ್ಯದರ್ಶಿಗಳಾದ ಶ್ರೀ. ಗಿರೀಶ. ವ್ಹಿ. ಕಾಳೆ. ಇವರು ಓದಿದರು ಮತ್ತು ಎಲ್ಲ ಸದಸ್ಯರು ಸರ್ವಾನುಮತದಿಂದಾ ದೃಢೀಕರಿಸಿದರು.<br>ಸೂಚಕರು :– ಶ್ರೀ. ಶಂಕರರಾವ. ಚವ್ಹಾಣ.<br>ಅನುಮೋದಕರು:– ಶ್ರೀ. ವಿಜಯಕುಮಾರ. ಚವ್ಹಾಣ. |
| 04. | ಸನ್ 2020–21 ಮತ್ತು 2021–22ನೇ ಸಾಲಿನ ಜಮಾ ಖರ್ಚಿನ ಲೆಕ್ಕಪತ್ರಗಳನ್ನು ಒದಗಿಸುವದು ಮತ್ತು ಅಡಿಟ್ ವರದಿಯ ಪರಿಶೀಲನೆ ಹಾಗೂ ಅನುಮೋದನೆ. | ಸನ್ 2020–21 ಮತ್ತು 2021–22ನೇ ಸಾಲಿನ ಜಮಾ ಖರ್ಚಿನ ಲೆಕ್ಕ ಪತ್ರಗಳನ್ನು ಮತ್ತು ಅಡಿಟ್ ವರದಿಗಳನ್ನು ಸಂಸ್ಥೆಯ ಖಜಾಂಚಿಗಳಾದ ಶ್ರೀ. ಪ್ರಕಾಶ ಜೆ. ಕಸುಂದೆ. ಇವರು ಮಂಡಿಸಿದರು, ಸದರಿ ಅವಧಿಯ ಎಲ್ಲ ಲೆಕ್ಕ ಪತ್ರಗಳನ್ನು ಹಾಗೂ ಅಡಿಟ್ ವರದಿಗಳನ್ನು ಸದಸ್ಯರು ಪರಿಶೀಲಿಸಿದರು ಮತ್ತು ಅವುಗಳು ಯಾವುದೇ ತರಹದ ಲೋಪ ದೋಶ ರಹಿತವಾಗಿವೆ ಎಂದು ನಿರ್ದರಿಸಿ ಸದರಿ ಮಂಡಿಸಿದ ಲೆಕ್ಕ ಪತ್ರಗಳು/ಅಡಿಟ್ ವರದಿಗಳನ್ನು ಅನುಮೋದಿಸಿ ಸರ್ವಾನುಮತದಿಂದಾ ಠರಾವು ಪಾಸು ಮಾಡಲಾಯಿತು.<br>ಸೂಚಕರು :– ಶ್ರೀ. ಮಹೇಶ. ಕವಟೇಕರ.<br>ಅನುಮೋದಕರು:– ಶ್ರೀ. ಸೂರ್ಯಕಿರಣ. ಯಂದೆ. |
| 05. | ರಾಜ್ಯ ಸಂಸ್ಥೆಯ ಪ್ರಗತಿ ಪರಿಶೀಲನೆ ಕುರಿತು. | ಕಾರ್ಯಾಧ್ಯಕ್ಷರಾದ ಶ್ರೀ. ಶ್ರೀನಿವಾಸ ಪೇಟಕರ ರವರು ಸಂಸ್ಥೆ ಹಮ್ಮಿಕೊಂಡ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು. ರಾಜ್ಯಸಂಸ್ಥೆಯ ಪ್ರಗತಿ ಬಗ್ಗೆ ವಿವರಣೆಯನ್ನು ನೀಡಿದರು. ಸದರಿ ಕಾರ್ಯ ಚಟುವಟಿಕೆಗಳು ಅತ್ಯುತ್ತಮವಾಗಿವೆ ಎಂದು ಎಲ್ಲರೂ ಮೇಚ್ಚುಗೆ ವ್ಯಕ್ತಪಡಿಸಿದರು. ಮತ್ತು ಸಂಸ್ಥೆ ಇನ್ನು ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಎಲ್ಲ ರೀತಿಯ ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು.<br>ಸೂಚಕರು :– ಶ್ರೀ. ಮನೋಜ. ಸವಣೂರ.<br>ಅನುಮೋದಕರು:– ಶ್ರೀ. ಮೋಹನರಾವ. ಜಾಧವ. |
| 06. | ಅಗಲಿದ ರಾಜ್ಯ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸದಸ್ಯ ದಿ. ಶ್ರೀ. ಸತ್ಯನಾರಾಯಣ ದರ್ಶನಕರವರ ಸ್ಥಾನಕ್ಕೆ ಬೇರೊಬ್ಬ ಸದಸ್ಯರನ್ನು ನೇಮಿಸುವ ಕುರಿತು. | ಅಗಲಿದ ರಾಜ್ಯ ಸಂಸ್ಥೆಯ ಕಾರ್ಯಕಾರಿ ಮಂಡಳಿ ಸದಸ್ಯರಾಗಿದ್ದ ಶ್ರೀ. ಸತ್ಯನಾರಾಯಣ. ಎಲ್. ದರ್ಶನಕರ. ಇವರ ಸ್ಥಾನಕ್ಕೆ ಬೇರೊಬ್ಬ ಸದಸ್ಯರನ್ನು ನೇಮಿಸುವ ಕುರಿತು ಚರ್ಚಿಸಲಾಗಿ ಸದರಿ ಸ್ಥಾನಕ್ಕೆ ಶ್ರೀ. ವಸಂತರಾವ. ಸಗೀರಾಮ್ ಕೇಶ್ವತ್‌ಕರ. ಸಾ॥ ಸಿಂದಗಿ ಜಿ॥ ವಿಜಯಪುರ ಇವರನ್ನು ನೇಮಿಸಿ ಸರ್ವಾನುಮತದಿಂದಾ ಠರಾವು ಪಾಸುಮಾಡಲಾಯಿತು.<br>ಸೂಚಕರು :– ಶ್ರೀ. ಮಹೇಶ. ಕವಟೇಕರ.<br>ಅನುಮೋದಕರು:– ಶ್ರೀ. ಜಯರಾಮರಾವ. ಧಾಯರೆ. |
| 07. | ರಾಜ್ಯ ಸಂಸ್ಥೆಯ ವತಿಯಿಂದ ನಮ್ಮ ಕುಲದೇವತೆ ಶ್ರೀ. ನಿಮಿಷಾಂಬಾ ದೇವಿಯ ಮೂಲ ಸ್ಥಾನವಾದ ಶ್ರೀರಂಗಪಟ್ಟಣ ತಾಲೂಕಿನ ಗಂಜಾಮ್ ಗ್ರಾಮಕ್ಕೆ | ರಾಜ್ಯ ಸಂಸ್ಥೆವತಿಯಿಂದಾ ನಮ್ಮ ಕುಲದೇವತೆ ಶ್ರೀ. ನಿಮಿಷಾಂಬಾ ದೇವಿಯ ನೆಲೆಸಿರುವ ಮೂಲ ಸ್ಥಾನವಾದ ಶ್ರೀರಂಗಪಟ್ಟ ತಾಲೂಕಿನ ಗಂಜಾಮ್‌ದಲ್ಲಿ ದೇಶಾದ್ಯಂತ ದೇವಿ ದರ್ಶನಕ್ಕೆ/ಸೇವೆಗೆ ಆಗಮಿಸಿರುವ ಸಮಾಜ ಬಾಂಧವರ ಅನುಕೂಲಕ್ಕಾಗಿ ಸುಸಜ್ಜಿತವಾದ ಒಂದು ಯಾತ್ರಿ ನಿವಾಸ ಹಾಗೂ |

| | | |
|---|---|---|
| | ದೇಶಾದ್ಯಂತ ದೇವಿ ದರ್ಶನಕ್ಕೆ ಆಗಮಿಸುವ ಸಕಲ ನಮ್ಮ ಸಮಾಜ ಬಾಂಧವರ ಅನಕೂಲಕ್ಕಾಗಿ ಸುಸಜ್ಜಿತವಾದ ಯಾತ್ರಿ ನಿವಾಸ ಮತ್ತು ಸಮುದಾಯ ಭವನ ನಿರ್ಮಿಸುವ ಸಲುವಾಗಿ ವಿಶಾಲವಾದ ನಿವೇಶನವನ್ನು ಹೊಂದುವುದರ ಬಗ್ಗೆ. | ಸಮುದಾಯ ಭವನ ನಿರ್ಮಿಸುವ ಸಲುವಾಗಿ ಚರ್ಚಿಸಲಾಗಿ ಗಂಜಾಂದ ಗುಂಬಜ ರಸ್ತೆಯಲ್ಲಿರುವ ನಮ್ಮ ಸಮಾಜ ಬಾಂಧವರಾದ ಶ್ರೀ. ಟಿ. ಪ್ರಕಾಶರಾವ ಇವರು ತಮ್ಮ ಮಾಲ್ಕಿಯಲ್ಲಿರುವ ಬೆಂಗಳೂರು, ಮೈಸೂರು ಎನ್.ಎಚ್. ರೋಡಿಗೆ ಹೊಂದಿಕೊಂಡಿರುವ ಸರ್ವೆ ನಂ. **586/3** ಪೈಕಿ 10 ಗುಂಟೆ ಜಮೀನನ್ನು ರಾಜ್ಯ ಸಂಸ್ಥೆಗೆ ಪ್ರತಿ ಗುಂಟೆಗೆ ರೂ. 7 (ಏಳು) ಲಕ್ಷಗಳಂತೆ ಕೊಡುವುದಾಗಿ ತಿಳಿಸಿದರು. ಮತ್ತು ಇದರಲ್ಲಿ 1 ಗುಂಟೆ ಜಮೀನನ್ನು ಉಚಿತವಾಗಿ ನೀಡಲು ಒಪ್ಪಿಗೆ ಸೂಚಿಸಿದರು. ಹಾಗೂ 2 ಗುಂಟೆ ಜಾಗೆಯನ್ನು ಖರೀದಿಸಲು ಬೇಕಾದ ಮೊತ್ತವನ್ನು ಮಹಾರಾಷ್ಟ್ರ ಸಮಾಜ ಬಾಂಧವರು ಕೊಡುವುದಾಗಿ ವಾಗ್ದಾನ ಮಾಡಿದರು. ಇನ್ನುಳಿದ 7 ಗುಂಟೆ ಜಾಗೆ ಖರೀದಿಸಲು ರಾಜ್ಯಾದ್ಯಂತ ಇರುವ ಸ್ಥಾನಿಕ ಸಮಾಜದವರು ಮತ್ತು ದಾನಿಗಳು ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು. ಅದರಂತೆ ಸದರಿ ಜಾಗೆಯನ್ನು ಖರೀದಿಸಲು ಸರ್ವಾನುಮತದಿಂದಾ ನಿರ್ಣಯಿಸಿ ಠರಾವು ಪಾಸು ಮಾಡಲಾಯಿತು. ಅಲ್ಲದೆ ಸದರಿ ನಿವೇಶನ ಖರೀದಿಸಲು ಸ್ಥಳದಲ್ಲಿಯೇ ಶ್ರೀ ಗಣೇಶರಾವ ಡೋಂಗರಸೋನೆ ಡಾವಣಗೆರೆ ಅಧ್ಯಕ್ಷರು, ಸಮಾಜದಿಂದಾ 1 ಲಕ್ಷ ರೂ. ಶ್ರೀ ಶಂಕರರಾವ. ತೆ. ಚವ್ಹಾಣ. ಹುಣಸಗಿ ಇವರು ರೂ. 1,01,001/– ರೂ. ಶ್ರೀ. ವಸಂತರಾವ ಕೇಶ್ವತಕರ. ಸಿಂದಗಿ. ಇವರು 1 ಲಕ್ಷ ರೂಪಾಯಿ ಶ್ರೀ. ಶ್ರೀಧರ ಪೋಣಾರಕರ ಶಿವಮೊಗ್ಗ ಇವರು 25,000/–, ಶ್ರೀ. ವಿಜಯಕುಮಾರ ಚವ್ಹಾಣ. ಕೊಟ್ಟೂರು. ಇವರು ರೂ. 1,00,000/– ಶ್ರೀ. ಹಣಮಂತಪ್ಪ. ಕಂಚಗಾರ. ಮುಂಡರಗಿ. 25,000/– ರೂ. ಸೋಮವಂಶ ಆರ್ಯ ಕ್ಷತ್ರೀಯ ಸಮಾಜ ಗದಗದಿಂದಾ 25,000/– ರೂ. ಶ್ರೀ. ಪ್ರಸಾದರಾವ ನಾಗರೆ. ಧೂಳೆ. ಮಹಾರಾಷ್ಟ್ರ 31,000/– ಶ್ರೀ ಪ್ರೇಮಕುಮಾರ. ಧಾಯರೆ ಚನ್ನೈ 25,000/–. ಶ್ರೀ. ರಾಮಪ್ರಸಾದ ಕವಟೇಕರ. ಬೆಂಗಳೂರು 25,000/– ಶ್ರೀ. ಜೈರಾಮರಾವ ಧಾಯರೆ. ಗಂಜಾಮ್. 25,000/– ಶ್ರೀ. ಮಹೇಶ. ಕವಟೇಕರ. ಬೆಂಗಳೂರು. ರೂ. 25,000/– ಕೊಡುವದಾಗಿ ವಾಗ್ದಾನ ಮಾಡಿದರು. ಅಲ್ಲದೆ ಸಭೆಯಲ್ಲಿ ಹಾಜರಿದ್ದ ಅನೇಕ ಸದಸ್ಯರು ಸ್ಥಾನಿಕ ಸಮಾಜದ ಅಧ್ಯಕ್ಷರು ತಮ್ಮ ಸ್ಥಾನಿಕ ಸಮಾಜದಲ್ಲಿ ಚರ್ಚಿಸಿ ಉದಾರವಾಗಿ ದೇಣಿಗೆ ಕೊಡುವ ಕೊಡುವದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇವರೆಲ್ಲರಿಗೂ ರಾಜ್ಯ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸಲಾಯಿತು.<br>ಇದರ ಹೊರತಾಗಿ ಹುಬ್ಬಳ್ಳಿ ಸಮಾಜದವರು ಶೇಖರಿಸಿದ್ದ ರಾಜ್ಯ ಸಂಸ್ಥೆಯಲ್ಲಿರುವ ಶಿಕ್ಷಣ ನಿಧಿ ರೂ. 5,56,877/– ಹಾಗೂ ಕಾರ್ಪಸ ಫಂಡ್ ರೂ. 2,82,000/– ಅದರ ಬಡ್ಡಿ ಸಮೇತವಾಗಿ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ ನಿಯಮಿತ, ನವನಗರ ಶಾಖೆಯಲ್ಲಿರುವ ರಾಜ್ಯ ಸಂಸ್ಥೆಯ ಶಿಕ್ಷಣ ನಿಧಿ ಎಪ್.ಡಿ. ನಂ. 0187667 ರೂ. 8,06,250/–, ಕಾರ್ಪಸ ಫಂಡ್ ಎಪ್.ಡಿ. ನಂ. 0182459 ರೂ. 2,10,000/– ಹಾಗೂ ಶಿಕ್ಷಣ ಸಂಸ್ಥೆಗೆ ಸ್ಥಾಪನೆಗೆ ಮತ್ತು ಇನ್ನಿತರ ಮೂಲಗಳಿಂದ ಬಾಗಲಕೋಟೆ ಸಮಾಜದವರಿಂದ ಶೇಖರಿಸಿದ ಹಣದ ಎಫ್.ಡಿ. ನಂ. 0182459 ರೂ. 11,50,000/– ಇವೆಲ್ಲವನ್ನು ಮುರಿಸಿ ಸದರಿ ನಿವೇಶನ ಖರೀದಿಸಲು ವಿನಿಯೋಗಿಸಲು ನಿರ್ಣಯ ಕೈಗೊಂಡು ಠರಾವು ಪಾಸು ಮಾಡಲಾಯಿತು. ಅಲ್ಲದೆ ಸಭೆಯಲ್ಲಿ ಹಾಜರಿದ್ದ ಅನೇಕ |

| | | |
|---|---|---|
| | | ಸದಸ್ಯರು ಸ್ಥಾನಿಕ ಸಮಾಜದ ಅಧ್ಯಕ್ಷರು ತಮ್ಮ ಸ್ಥಾನಿಕ ಸಮಾಜದಲ್ಲಿ ಚರ್ಚಿಸಿ ಉದಾರವಾಗಿ ದೇಣಿಗೆ ಕೊಡುವದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇವರೆಲ್ಲರಿಗೂ ರಾಜ್ಯ ಸಂಸ್ಥೆಯಿಂದ ಧನ್ಯವಾಗಳನ್ನು ಅರ್ಪಿಸಲಾಯಿತು.<br>ಸೂಚಕರು :- ಶ್ರೀ. ಶಂಕರರಾವ. ಚವ್ಹಾಣ.<br>ಅನುಮೋದಕರು:- ಶ್ರೀ. ವಿಶ್ವನಾಥ. ಎಮ್. ಚಿತ್ರಗಾರ. |

| | | |
|---|---|---|
| 08. | ನಿಯೋಜಿತ ಶಿಕ್ಷಣ ಸಂಸ್ಥೆಯ ಪಗ್ರತಿ ಪರಿಶೀಲನೆ ಮತ್ತು ತತ್ಸಂಬಂಧ ಸೂಕ್ತ ನಿರ್ಣಯ ಕೈಗೊಳ್ಳುವದು. | ನಿಯೋಜಿತ ಶಿಕ್ಷಣ ಸಂಸ್ಥೆ ಸ್ಥಾಪನೆಗೆ ಆದಷ್ಟು ಬೇಗ ಚಾಲನೆ ಕೊಡಲು ನಿರ್ದರಿಸಲಾಯಿತು ಮತ್ತು ಸದರಿ ಗಂಜಾಮದಲ್ಲಿ ನಿವೇಶನ ಖರೀದಿಸಲು ರೂಪಾಯಿ ಒಂದು ಲಕ್ಷ ಅಥವಾ ಅದಕ್ಕಿಂತಲು ಹೆಚ್ಚಿನ ಮೊತ್ತವನ್ನು ನೀಡಿದ ದಾನಿಗಳಿಗೆ ನಿಯೋಜಿತ ಶಿಕ್ಷಣ ಸಂಸ್ಥೆಯ ವಂಶಪಾರಂಪರ್ಯ ಸದಸ್ಯತ್ವವನ್ನು ಕೊಡಲು ನಿರ್ಧರಿಸಲಾಯಿತು ಮತ್ತು ಒಂದು ಲಕ್ಷ ರೂಪಾಯಿ ಸಂದಾಯ ಮಾಡಿದ ಸ್ಥಾನಿಕ ಸಮಾಜದ ಅಧ್ಯಕ್ಷರಿಗೆ ಸಾಂಘಿಕ ವಂಶಪಾರಂಪರ್ಯ ಸದಸ್ಯತ್ವ ನೀಡಲು ನಿರ್ಧರಿಸಿ ಠರಾವು ಪಾಸುಮಾಡಲಾಯಿತು<br>ಸೂಚಕರು :- ಶ್ರೀ. ಶಂಕರರಾವ. ಚವ್ಹಾಣ.<br>ಅನುಮೋದಕರು:- ಶ್ರೀ. ಮನೋಜ. ಸವಣೂರ. |
| 09. | ನಿಯೋಜಿತ ಶಿಕ್ಷಣ ಸಂಸ್ಥೆಯ ವಾಗ್ದಾನಿಗಳಿಂದಾ ವಾಗ್ದಾನದ ಮೊತ್ತವನ್ನು ಕ್ರೂಢೀಕರಿಸುವದು. | ಈ ಮೊದಲು ಶಿಕ್ಷಣ ಸಂಸ್ಥೆ ಸ್ಥಾಪನೆಗೆ ರೂ. 1 ಲಕ್ಷ ರೂ. ಕೊಟ್ಟು ವಂಶಪಾರಂಪರ್ಯ ಸದಸ್ಯತ್ವವನ್ನು ಪಡೆದುಕೊಳ್ಳಲು ವಾಗ್ದಾನ ಮಾಡಿದವರನ್ನು ಸಂಪರ್ಕಿಸಿ ಸದರಿ ಮೊತ್ತವನ್ನು ಬೇಗನೆ ಸಂದಾಯ ಮಾಡಲು ವಿನಂತಿಸಲು ನಿರ್ದರಿಸಲಾಯಿತು. ಅಲ್ಲದೆ ನಿಯೋಜಿತ ಶಿಕ್ಷಣ ಸಂಸ್ಥೆ ಸ್ಥಾಪನೆಗೆ ಸಂಸ್ಥೆಯನ್ನು ರಜಿಸ್ಟ್ರೇಷನ ಮಾಡುವ ಮೊದಲು ನಿಗದಿತ ಹಣವನ್ನು ಸಂದಾಯ ಮಾಡಿದವರಿಗೆ ಶಿಕ್ಷಣ ಸಂಸ್ಥೇಯ ಸಂಸ್ಥಾಪಕ ವಂಶಪಾರಂಪರ್ಯ ಸದಸ್ಯರೆಂದು ಪರಿಗಣಿಸಲು ನಿರ್ಣಯಿಸಿ ಠರಾವು ಪಾಸಮಾಡಲಾಯಿತು.<br>ಸೂಚಕರು :- ಶ್ರೀ. ಹನಮಂತಪ್ಪ. ಕಂಚಗಾರ.<br>ಅನುಮೋದಕರು:- ಶ್ರೀ. ಮಹೇಶ. ಕವಟೇಕರ. |
| 10. | ಕರ್ನಾಟಕ ಸರಕಾರದ ಅಧಿನದಲ್ಲಿರುವ ಗಂಜಾಮ ಶ್ರೀ. ನಿಮಿಷಾಂಬಾ ದೇವಸ್ಥಾನವನ್ನು ಮರಳಿ ನಮ್ಮ ಸಮುದಾಯದ ಆಡಳಿತಕ್ಕೆ ಒಳಪಡಿಸುವಂತೆ ಕಾನೂನಾತ್ಮಕವಾಗಿ ಹೋರಾಟದ ರೂಪು ರೇಶೆಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ. | ಕರ್ನಾಟಕ ಸರಕಾರದ ಅಧಿನದಲ್ಲಿರುವ ಗಂಜಾಮ ಶ್ರೀ ನಿಮಿಷಾಂಬಾ ದೇವಸ್ಥಾನವನ್ನು ಕರ್ನಾಟಕ ರಾಜ್ಯ ಸೋಮವಂಶ ಆರ್ಯ ಕ್ಷತ್ರೀಯ ಸಮಾಜಕ್ಕೆ ವಹಿಸಿಕೊಡುವಂತೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮುಜರಾಯಿ ಇಲಾಖೆ ಸಚಿವರಿಗೆ ರಾಜ್ಯ ಸಂಸ್ಥೆ ಇಂದಾ ಬರೆದ ಪತ್ರವನ್ನು ಎಲ್ಲರು ಮೆಚ್ಚಿಕೆ ವ್ಯಕ್ತಪಡಿಸಿದರು ಮತ್ತು ಶ್ರೀರಂಗಪಟ್ಟಣ ಮತ್ತು ಮೈಸುರ ಭಾಗದಲ್ಲಿರುವ ಪ್ರಸಿದ್ಧ ಇತಿಹಾಸಕಾರರನ್ನು ರಾಜ್ಯ ಸಂಸ್ಥೆಯ ನಿಯೋಗದೊಂದಿಗೆ ಸಂಪರ್ಕಿಸಿ ಗಂಜಾಮ್ ಶ್ರೀ. ನಿಮಿಷಾಂಬಾ ದೇವಸ್ಥಾನಕ್ಕೆ ಸಂಬಂಧಿಸಿದ ಇತಿಹಾಸ ಮತ್ತು ಲಭ್ಯವಿದ್ದ ದಾಖಲಾತಿ, ಪುರಾವೆಗಳನ್ನು, ಮತ್ತು ಶ್ರೀರಂಗಪಟ್ಟಣ ಮತ್ತು ಮೈಸುರ ಗೆಜೆಟಿಯರ್ ಲಭ್ಯವಿದ್ದಲ್ಲಿ ಸಂಸ್ಥೆಗೆ ಒದಗಿಸಲು ಮನವಿ ಸಲ್ಲಿಸಿ ಕ್ರೂಡಿಕರಿಸಲು ನಿರ್ಣಯಿಸಿ ಹಾಗೂ ಇನ್ನು ಹೆಚ್ಚಿನ ರೀತಿಯಲ್ಲಿ ಕಾನೂನಾತ್ಮಕ ಪ್ರಯತ್ನವನ್ನು ಮುಂದುವರಿಸಲು ಸಂಸ್ಥೆಯ ಪದಾಧಿಕಾರಿಗಳಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ಠರಾವು |

| | | |
|---|---|---|
| | | ಪಾಸು ಮಾಡಲಾಯಿತು.<br>ಸೂಚಕರು :– ಶ್ರೀ. ಪುರುಷೊತ್ತಮ. ಕವಟೇಕರ.<br>ಅನುಮೋದಕರು:– ಶ್ರೀ. ಜಯರಾಮರಾವ. ಧಾಯರೆ. |
| 11. | ಸದರಿ ಈ ನಮ್ಮ ಸಹೋದರ ರಾಜು ಸೋಮವಂಶ ಆರ್ಯ ಕ್ಷತ್ರೀಯ ಸಮಾಜದ ಜೊತೆಗೆ ನಮ್ಮ ಸಮಾಜದೊಂದಿಗೆ ಬಾಂಧವ್ಯ ವೃದ್ದಿಸುವ ನಿಟ್ಟಿನಲ್ಲಿ ಕೂಲಂಕುಷವಾಗಿ ಚರ್ಚೆ. | ನಮ್ಮ ಸಹೋದರ ರಾಜು ಸೋಮವಂಶ ಆರ್ಯ ಕ್ಷತ್ರೀಯ ಸಮಾಜ ಮುಖಂಡರು ಅನಿವಾರ್ಯ ಕಾರಣಗಳಿಂದಾ ಸಭೆಯಲ್ಲಿ ಹಾಜರ ಇರದೆ ಇದ್ದುದರಿಂದಾ ಮರಳಿ ಅವರಿಗೆ ಮುಂದಿನ ಸಭೆಗಳಿಗೆ ಸೂಕ್ತ ರೀತಿಇಂದಾ ಸಂಪರ್ಕಿಸಿ ಆಹ್ವಾನ ನೀಡಿ ಚರ್ಚಿಸಲು ನಿರ್ಧರಿಸಲಾಯಿತು.<br>ಸೂಚಕರು :– ಶ್ರೀ. ಮಹೇಶ. ಕವಟೇಕರ.<br>ಅನುಮೋದಕರು:– ಶ್ರೀ. ಮನೋಜ. ಸವಣೂರ. |

| | | |
|---|---|---|
| 12. | ರಾಜ್ಯಾದ್ಯಂತ ನಮ್ಮ ಸಮುದಾಯ ಬಾಂಧವರ ಜನಗಣತಿ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿ, ವದು– ವರರ ಮಾಹಿತಿ ಹಾಗೂ ನಮ್ಮ ಸಮುದಾಯವರ ವಿವಿದ ಕಾರ್ಯಕ್ರಮಗಳು ಇತ್ಯಾದಿ ವಿಷಯಗಳ ಕುರಿತು ವಿವರ ಸಂಗ್ರಹಣೆಗಾಗಿ ರಾಜ್ಯ ಸಂಸ್ಥೆಯ ವತಿಯಿಂದ ವೆಬ್‌ಸೈಟ್ ತೆರೆದು ಎಲ್ಲ ವಿಷಯಗಳ ಗಣಕೀಕರಣ ಮಾಡುವುದರ ಬಗ್ಗೆ. | ಸದರಿ ವಿಷಯವಾಗಿ ಚರ್ಚಿಸಲಾಗಿ ನಮ್ಮ ಸಮುದಾಯದ ಸರ್ವತೋಮುಖ ಅಭಿವೃದ್ದಿಗಾಗಿ ಸಂಘಟನೆಯನ್ನು ಬಲ ಪಡಿಸುವುದಕ್ಕಾಗಿ ಮತ್ತು ವಿವಿದ್ದೊದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸೋಮವಂಶ ಆರ್ಯ ಕ್ಷತ್ರಿಯ ಸಮಾಜ ವತಿಯಿಂದಾ ಒಂದು ವೆಬ್‌ಸೈಟ್ ತೆರೆದು ಎಲ್ಲ ವಿಷಯಗಳನ್ನು ಗಣಕೀಕರಣ ಮಾಡುವದು ಅತ್ಯವಶ್ಯಕವಾಗಿದೆ ಎಂದು ನಿರ್ಣಯಿಸಿ ಸದರಿ ವಿಷಯದ ತಜ್ಞರ ಒಂದು ಸಮೀತಿಯನ್ನು ರಚಿಸಿ ಅವರಿಗೆ ವೆಬ್‌ಸೈಟ್ ತೆರೆಯಲು ನಿರ್ವಹಿಸಿಕೊಂಡು ಹೋಗಲು ಪರವಾನಿಗೆ ನೀಡಿ, ಅದಕ್ಕೆ ಅವಶ್ಯಕವಾದ ಹಣಕಾಸನ್ನು ರಾಜ್ಯ ಸಂಸ್ಥೆಯಿಂದಾ ಭರಿಸಲು ನಿರ್ಣಯಿಸಿ ಸರ್ವಾನು ಮತದಿಂದಾ ಠರಾವು ಪಾಸುಮಾಡಲಾಯಿತು.<br>ಸೂಚಕರು :– ಶ್ರೀ. ಪುರುಷೊತ್ತಮ. ಕವಟೇಕರ.<br>ಅನುಮೋದಕರು:– ಶ್ರೀ. ಮಹೇಶ. ಕವಟೇಕರ. |